## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಜಿ.ಎನ್.ಎಂ ಪರೀಕ್ಷೆಗಳನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳಲ್ಲಿ ನಡೆಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ ಎಂಇಡಿ 161 ಎಂಎಸ್ಎಫ್ 2020, ದಿನಾಂಕ 30/06/2020
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 31/03/2023 ರಂದು ಮತ್ತು ದಿನಾಂಕ 10/04/2023 ರಂದು ನಡೆದ ಸಭೆಯ ನಡವಳಿ

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಜಿಎನ್ಎಂ ಕೋರ್ಸುಗಳ ಪರೀಕ್ಷೆಗಳನ್ನು ಕರ್ನಾಟಕ ಶುಶ್ರೂಷಾ ಪರೀಕ್ಷಾ ಮಂಡಳಿ ಮತ್ತು ಅರೆ ವೈದ್ಯಕೀಯ ಮಂಡಳಿಯ ವತಿಯಿಂದ ನಡೆಸಲು ಕೆಲವು ಮಾರ್ಪಾಡುಗಳನ್ನು ಸೂಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸಭೆಯ ನಡವಳಿಗಳಲ್ಲಿ ಜಿಎನ್ಎಂ ಪರೀಕ್ಷೆಗೆ ಸಂಬಂದಿಸಿದಂತೆ, ಮಾಧ್ಯಮಗಳಲ್ಲಿ ಬಿತ್ತರವಾದ ಪ್ರಕಟಣೆಯ ಹಿನ್ನೆಲೆ ಹಾಗೂ ಹಲವರಿಂದ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದಾಗಿ ತಿಳಿದುಬಂದ ಕಾರಣಗಳ ಹಿನ್ನೆಲೆಯಲ್ಲಿ ಜಿಎನ್ಎಂ ಪರೀಕ್ಷೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಮತ್ತು ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ಹಾಗೂ ಆ ಮೂಲಕ ವೈದ್ಯಕೀಯ ಕೋರ್ಸುಗಳಿಗೆ ಸಂಬಂದಿಸಿದಂತೆ ಅನುಸರಿಸುತ್ತಿರುವ ಕ್ರಮಗಳನ್ನೇ ಯಥಾ ರೀತಿ ಅನುಸರಿಸಿದಲ್ಲಿ ಉತ್ತಮ ಗುಣಮಟ್ಟದ ವಿದ್ಯಾರ್ಥಿಗಳು ಸಮಾಜಕ್ಕೆ ದೊರಕಿದಂತಾಗುವುದು. ಈ ನಿಮಿತ್ತ ಜಿಎನ್ಎಂ ಕೋರ್ಸುಗಳ ಪರೀಕ್ಷೆಗಳನ್ನು RGUHS ನ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲು ಸಭೆಯು ನಿರ್ಣಯಿಸಿದೆ. ಮುಂದುವರೆದು ಈ ಹಿಂದಿನ ಪದ್ಧತಿಯಾದ ಖಾಲಿ ಉತ್ತರ ಪತ್ರಿಕೆಯನ್ನು ನರ್ಸಿಂಗ್ ಬೋರ್ಡ್‌ನಿಂದ ಪಡೆದು ಪರೀಕ್ಷೆಯ ನಂತರ ಸ್ಕ್ಯಾನ್ ಮಾಡುವ ಹಳೆಯ ಪದ್ಧತಿಯನ್ನು ರದ್ದು ಮಾಡಲು ನಿರ್ಣಯಿಸಿದೆ. ಹಾಗೂ ಇನ್ನಿತರೆ ಹಲವು ಅಂಶಗಳನ್ನು ಅಳವಡಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಅದರನ್ವಯ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನಿಂದ ನಡೆಸುತ್ತಿರುವ ಜಿ.ಎನ್.ಎಂ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಲು ಅನುವಾಗುವಂತೆ ಇನ್ನು ಮುಂದೆ ಎಲ್ಲಾ ಜಿಎನ್ಎಂ ಕೋರ್ಸುಗಳ ಪರೀಕ್ಷೆಗಳನ್ನು RGUHS ನ ಪರೀಕ್ಷಾ ಕೇಂದ್ರಗಳಲ್ಲಿಯೇ ನಡೆಸಲು ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 48 ಎಂಎಂಸಿ 2023, ಬೆಂಗಳೂರು, ದಿನಾಂಕ: 21/04/2023**

ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಜಿ.ಎನ್.ಎಂ ಪರೀಕ್ಷೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳಲ್ಲಿಯೇ ಈ ಕೆಳಕಂಡ ಸುಧಾರಣಾ ಅಂಶಗಳೊಂದಿಗೆ ನಡೆಸುವಂತೆ ಆದೇಶಿಸಿದೆ.

1) ಖಾಲಿ ಉತ್ತರ ಪತ್ರಿಕೆಗಳನ್ನು ನರ್ಸಿಂಗ್ ಬೋರ್ಡ್‌ನಿಂದ ಪಡೆದು ಪರೀಕ್ಷೆಯ ನಂತರ ಸ್ಕ್ಯಾನ್ ಮಾಡುವ ಹಳೆಯ ಪದ್ಧತಿಯನ್ನು ರದ್ದುಪಡಿಸುವುದು.

21-4-2023

Scanned with CamScanner

2) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳಲ್ಲಿಯೇ ಜಿಎನ್‌ಎಂ ಪರೀಕ್ಷೆಗಳನ್ನು ನಡೆಸುವುದು.

3) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರೀಕ್ಷಾ ಮೌಲ್ಯಮಾಪನದ ಕ್ರಮಗಳಾದ ಪರೀಕ್ಷಾ ಸ್ಥಳದಲ್ಲಿಯೇ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡುವ ಮತ್ತು ಡಿಜಿಟಲ್ ಮೌಲ್ಯಮಾಪನ ಕ್ರಮವನ್ನು ಕಡ್ಡಾಯವಾಗಿ ಅನುಸರಿಸುವುದು.

4) ಪರೀಕ್ಷಾ ಕೇಂದ್ರಗಳನ್ನು ಕಡ್ಡಾಯವಾಗಿ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳು, ಸರ್ಕಾರಿ ಮತ್ತು ಖಾಸಗಿ ಆಯುಷ್ ಕಾಲೇಜುಗಳು ಹಾಗೂ ಸರ್ಕಾರಿ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಮಾತ್ರ ನಡೆಸುವುದು.

5) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ಇವರು RGUHS ನ ರಿಜಿಸ್ಟ್ರಾರ್ ಮತ್ತು ರಿಜಿಸ್ಟ್ರಾರ್ (ಮೌಲ್ಯಮಾಪನ) ಇವರುಗಳ ಜೊತೆಗೆ ಸಮನ್ವಯ ಸಾಧಿಸಿ RGUHS ನಲ್ಲಿ ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳಾದ ಪರೀಕ್ಷಾ ಕೇಂದ್ರಗಳು, ಸ್ಕ್ಯಾನಿಂಗ್ ಸಾಧನಗಳು, ಸಾಫ್ಟ್‌ವೇರ್, ಪರೀಕ್ಷಾ ಹಾಲ್ ವೀಕ್ಷಿಸಲು ಸಿಸಿಟಿವಿ ಕ್ಯಾಮರಗಳು, ಕಮಾಂಡ್ ರೂಂ ಸೇವೆಗಳು, ಡಿಜಿಟಲ್ ಮೌಲ್ಯಮಾಪನ ಇತ್ಯಾದಿ ಸೌಲಭ್ಯಗಳನ್ನು ಬಳಸಿಕೊಳ್ಳುವುದು.

6) ರಿಜಿಸ್ಟ್ರಾರ್, RGUHS ಇವರು ಪಾರದರ್ಶಕ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸಲು ತಗಲುವ ವೆಚ್ಚದ ಬಿಲ್ಲನ್ನು ಚಾಲ್ತಿಯಲ್ಲಿರುವ ದರಗಳಂತೆ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಲ್ಲಿಸುವುದು. ಕಾರ್ಯನಿರ್ವಾಹಕ ನಿರ್ದೇಶಕರು ಬಿಲ್ಲಿನ ಮೊತ್ತವನ್ನು ನರ್ಸಿಂಗ್ ಬೋರ್ಡ್ ಮೂಲಕ ಕಾನೂನಿನ ಪ್ರಕಾರ ಪಾವತಿ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು. ದರಗಳ ವಿರವನ್ನು **ಅನುಬಂಧ**ದಲ್ಲಿರಿಸಿದೆ.

7) ನರ್ಸಿಂಗ್ ಪರೀಕ್ಷೆಗಳನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಸುವ ಹಾಗೂ ಮೇಲ್ವಿಚಾರಣೆ ನಡೆಸುವ ಸಂಪೂರ್ಣ ಜವಾಬ್ದಾರಿಯು ಕಾರ್ಯನಿರ್ವಾಹಕ ನಿರ್ದೇಶಕರು, ವಿಶೇಷಾಧಿಕಾರಿ, ಪ್ಯಾರಾಮೆಡಿಕಲ್ ಬೋರ್ಡ್, ರಿಜಿಸ್ಟ್ರಾರ್, ಕೆಎನ್‌ಸಿ ಮತ್ತು ಕಾರ್ಯದರ್ಶಿ, ಕರ್ನಾಟಕ ನರ್ಸಿಂಗ್ ಪರೀಕ್ಷಾ ಮಂಡಳಿ ಇವರುಗಳದ್ದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21-4-2023

**(ಎಂ. ಜ್ಯೋತಿಪ್ರಕಾಶ್)**
ಸರ್ಕಾರದ ಅಧೀನ ಕಾರ್ಯದರ್ಶಿ-2,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**

1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4 ನೇ ಟಿ ಬ್ಲಾಕ್, ಬೆಂಗಳೂರು -560 041.
2. ಕುಲಸಚಿವರು, (ಮೌಲ್ಯಮಾಪನ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4 ನೇ ಟಿ ಬ್ಲಾಕ್, ಬೆಂಗಳೂರು -560 041.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಬೆಂಗಳೂರು
5. ವಿಶೇಷಾಧಿಕಾರಿ, ಪ್ಯಾರಾಮೆಡಿಕಲ್ ಬೋರ್ಡ್, ಲಕ್ಷ್ಮೀ ಕಾಂಪ್ಲೆಕ್ಸ್, ಕೆ.ಆರ್ ಮಾರುಕಟ್ಟೆ, ಹತ್ತಿರ ಬೆಂಗಳೂರು.
6. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು, ಗಾಂಧೀನಗರ, ಬೆಂಗಳೂರು.
7. ಕಾರ್ಯದರ್ಶಿಗಳು, ಕರ್ನಾಟಕ ನರ್ಸಿಂಗ್ ಪರೀಕ್ಷಾ ಮಂಡಳಿ, ಬೆಂಗಳೂರು.

Scanned with CamScanner

8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.

Scanned with CamScanner